S. C. No.36/2014
PW.15

**ದೋ.ಸಾ. : 24 ಫ್ರಾ.ಸಾ. : 15**

**ದಿನಾಂಕಃ 02-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

5. ನಾನು ಠಾಣೆಗೆ ಹೋಗಿ ನೋಡಿದ ಆರೋಪಿಯೇ, ಘಟನೆ ನಡೆದ ದಿನ ಜಾನಕಿ ಮನೆಯ ಕಡೆಯಿಂದ ಕದ್ರಾ ಕಡೆಗೆ ಓಡಿ ಹೋದ ವ್ಯಕ್ತಿಯಾಗಿರುತ್ತಾನೆ. ನಂತರ ವಿಚಾರ ತಿಳಿಯಲಾಗಿ, "ಆರೋಪಿಯು ಮೃತ ವೇಲು ರವರ ಮನೆಯಿಂದ ರೂ.45,000/- ಹಣವನ್ನು ಕಳುವು ಮಾಡಿದ್ದು, ಅದರಲ್ಲಿ ರೂ.37,000/- ಹಣವನ್ನು ಆರೋಪಿಯು ಪುನಃ ಮೃತ ವೇಲು ರವರ ಮನೆಯ ಒಳಗೆ ತಂದು ಇಡುವಾಗ, ವೇಲು ಅದನ್ನು ನೋಡಿದ್ದು,

ಆರೋಪಿಗೆ ಉಳಿದ ಹಣವನ್ನು ತಂದು ಕೊಡುವಂತೆ ಹೇಳಿರುತ್ತಾನೆ ಹಾಗೂ ಇಲ್ಲವಾದರೆ, ನಿನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನು ನೀಡುವುದಾಗಿ ಹೇಳಿದ್ದರಿಂದ, ಆರೋಪಿಯು ಹೆದರಿ ವೇಲುವನ್ನು ಕೊಲೆ ಮಾಡುವ ಉದ್ದೇಶದಿಂದ, ಆತನನ್ನು ಹಣ ಕೊಡುತ್ತೇನೆಂದು ಅವರ ಮನೆಯ ಹತ್ತಿರ ಇರುವ ಕಾಡಿನ ಬಳಿ ಕರೆದಿದ್ದು, ಆಗ ಆತ ತನ್ನ ಮಗನೊಂದಿಗೆ ಆರೋಪಿ ಹೇಳಿದ ಸ್ಥಳಕ್ಕೆ ಹೋದಾಗ, ಆರೋಪಿಯು ಕತ್ತಿಯಿಂದ ವೇಲುವಿಗೆ ಕಡಿದು, ಕೊಲೆ ಮಾಡಿದ್ದು, ಅದನ್ನು ನೋಡಿದ ಆತನ ಮಗ ಸತ್ಯ ನಾರಾಯಣ ಮನೆಯ ಕಡೆಗೆ ಓಡಿ ಬರುತ್ತಿರುವಾಗ, ಆರೋಪಿಯು ಆತನಿಗೂ ಸಹ ಕತ್ತಿಯಿಂದ ಕಡಿದು, ಕೊಲೆ ಮಾಡಿರುತ್ತಾನೆ. ಆ ನಂತರ ವೇಲುವಿನ ಮನೆಗೆ ಬಂದು, ಅಲ್ಲಿಯೂ ಸಹ ಆತನ ಮಗಳಾದ ಅಶ್ವಿನಿಯನ್ನು ಕತ್ತಿಯಿಂದ ಕಡಿದು, ಕೊಲೆ ಮಾಡಿರುತ್ತಾನೆ ಹಾಗೂ ಆತನ ಹೆಂಡತಿಯಾದ ಜಾನಕಿಯ ಮೇಲೆ ಕತ್ತಿಯಿಂದ ಮಾರಣಾಂತಿಕ ಹಲ್ಲೆ ಮಾಡಿರುತ್ತಾನೆ"ಎಂದು ತಿಳಿದು ಬಂತು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

6. ಘಟನಾ ದಿನ ಆರೋಪಿಯು ವೇಲುವಿನ ಮನೆಯ ಕಡೆಯಿಂದ ಕಧ್ರಾ ಕಡೆಗೆ ಓಡಿ ಹೋಗುತ್ತಿರುವಾಗ, ಆತನ ಕೈಯಲ್ಲಿ ಕತ್ತಿ ಇದ್ದುದ್ದನ್ನು, ನಾನು ವಿದ್ಯುತ್ ದೀಪದ ಬೆಳಕಿನಲ್ಲಿ ನೋಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು–26 ಕತ್ತಿ, ಆರೋಪಿಯ ಬಟ್ಟೆಗಳಾದ ಮುದ್ದೆ ಮಾಲು–27 ಟೀ- ಶರ್ಟ್, ಮುದ್ದೆ ಮಾಲು–28 ಚಡ್ಡಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುঃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ</u>**

7. ಮೃತ ವೇಲು ನನಗೆ ಸುಮಾರು 20 ವರ್ಷಗಳಿಂದ ಪರಿಚಯ ಇರುತ್ತಾರೆ. ಆತನ ಕುಟುಂಬ ನನಗೆ ಗೊತ್ತಿರುತ್ತದೆ. ರಾಜೀವ ನಗರದಲ್ಲಿರುವ ನನ್ನ ತಾಯಿಯ ಮನೆಯ ಮುಖ್ಯ ದ್ವಾರ ಉತ್ತರ ದಿಕ್ಕಿನಲ್ಲಿರುತ್ತದೆ. ಈ ಪ್ರಕರಣದ ಘಟನೆ ನಡೆಯುವ ಕಾಲದಲ್ಲಿ ನಮ್ಮ ಮನೆಯ ಮುಂದಿನ ರಸ್ತೆಯು ಡಾಂಬರ್ ರಸ್ತೆಯಾಗಿರುತ್ತದೆ. ನಿಮ್ಮ ಮನೆಯ ಹಿಂದುಗಡೆ ಚಾಸಾ–23 ಮಧು ಪಿ.ಕೆ ರವರ ಮನೆ ಇದೆಯಾ? ಎಂದರೆ ಸಾಕ್ಷಿಯು ಹಿಂದುಗಡೆ ಇದೆ, ಆದರೆ ಅದು ಸ್ವಲ್ಪ ದೂರದಲ್ಲಿ ಎಂದರೆ ಸುಮಾರು 200 ಮೀಟರ್ ದೂರದಲ್ಲಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ–23 ರವರ ಮನೆಯ ಮುಖ್ಯ ದ್ವಾರವೂ ಸಹ ಉತ್ತರ ದಿಕ್ಕಿಗೆ ಇರುತ್ತದೆ. ಚಾಸಾ–23 ರವರ ಮನೆಯ ಬಲಗಡೆ ಚಾಸಾ–26 ಶಾಂತಾ, ಚಾಸಾ–27 ಕವಿತಾ ರವರ ಮನೆ ಇರುತ್ತದೆ.

8. ಚಾಸಾ–23 ರವರ ಮನೆಯ ಬಲಗಡೆಯಲ್ಲಿ 200 ಮೀಟರ್ ದೂರದಲ್ಲಿ ರಾಜೀವ ನಗರದಿಂದ ಕಧ್ರಾ ಕಡೆಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಮೃತ ವೇಲು ರವರ ಮನೆಯ ಪಕ್ಕದಲ್ಲಿ ಕಧ್ರಾಗೆ ಹೋಗುವ ರಸ್ತೆ ಇರುತ್ತದೆ. ಮೃತ ವೇಲು ರವರ ಮನೆಯ ಮುಖ್ಯ ದ್ವಾರ ಕಧ್ರಾ ಡ್ಯಾಮ್ ಇರುವ ದಿಕ್ಕಿನ ಕಡೆಗೆ ಇರುತ್ತದೆ ಎಂದರೆ ಸಾಕ್ಷಿಯು ಅಂಗಡಿಯು ಡ್ಯಾಮ್ ಇರುವ ದಿಕ್ಕಿನ ಕಡೆಗೆ ಇರುತ್ತದೆ ಹಾಗೂ ಅವರ ಮನೆಯ ಮುಂಬಾಗಿಲು ರಸ್ತೆಯ ಕಡೆಗೆ ಇರುತ್ತದೆ. ಚಾಸಾ–23, 26, 27 ರವರ ಮನೆಗೆ ಪ್ರತ್ಯೇಕ ಬೇಲಿಯಿಂದ ಮಾಡಿದ ಕಂಪೌಂಡ್ ಇರುತ್ತದೆ.

9. 2016 ನೇ ಇಸವಿಯಲ್ಲಿ ವೇಲು ರವರ ಮನೆಯಿಂದ ಪಶ್ಚಿಮ ದಿಕ್ಕಿನಲ್ಲಿ 300 ಮೀಟರ್ ದೂರದಲ್ಲಿ ಬೀದಿ ದೀಪ ಹಾಕಿದ್ದರು ಎಂದರೆ ಸಾಕ್ಷಿಯು ಈ ಹಿಂದಿನಿಂದಲೂ ಬೀದಿ ದೀಪಗಳು ಹಾಗೂ ಡಾಂಬರ್ ರಸ್ತೆಗಳು ಇದ್ದವು ಎಂದು ನುಡಿಯುತ್ತಾರೆ. ನನ್ನ ತಾಯಿಯ ಮನೆ ದೊಡ್ಡದಿರುತ್ತದೆ. ಘಟನೆ ನಡೆದ ದಿನ ರಾತ್ರಿ ನಾವು ಊಟ ಮಾಡಿ, ಮನೆಯ ಮುಂದುಗಡೆ ಪಾತ್ರೆಗಳನ್ನು ತೊಳೆಯಲು ಹೋದಾಗ, ವೇಲು ರವರ ಮನೆಯಿಂದ ಚೀರಾಟದ ಶಬ್ದ ಕೇಳಿ ಬಂತು. ಶಬ್ದ ಕೇಳಿ ಬಂದ ನಂತರ ನಾನು, ಚಾಸಾ–26, 27 ರವರು ವೇಲು ರವರ ಮನೆಯ ಹತ್ತಿರ ಹೋಗಿ ನೋಡಿರುತ್ತೇವೆ. ಅಲ್ಲಿ ತುಂಬಾ ಜನರು ಸೇರಿದ್ದರು, ಅದಾದ ನಂತರ ಅಲ್ಲಿಗೆ ಸುಮಾರು ಜನ ಪೊಲೀಸರೂ ಸಹ ಬಂದಿದ್ದರು.

10. ಸ್ಥಳಕ್ಕೆ ಬಂದ ಪೊಲೀಸರು ನಮ್ಮ ಬಳಿ ವಿಚಾರಿಸಿರುತ್ತಾರೆ. ಅಲ್ಲಿ ಸೇರಿದ್ದ ಜನರ ಬಳಿ ಹಾಗೂ ಅಲ್ಲಿಗೆ ಬಂದ ಪೊಲೀಸರ ಬಳಿ ನಾನು ಆರೋಪಿಯು ಓಡಿ ಹೋಗಿರುವುದನ್ನು ಹೇಳಿರುತ್ತೇನೆ. ಆರೋಪಿಯು ಓಡಿ ಹೋಗಿದ್ದನ್ನು ನಾನು ಪೊಲೀಸರ ಬಳಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ಕತ್ತಿಯನ್ನು ಹಿಡಿದುಕೊಂಡು ಹೋಗಿದ್ದನ್ನು ನೋಡಿರುತ್ತೇನೆಂದೂ ಸಹ ನಾನು ಪೊಲೀಸರ ಬಳಿ ಹೇಳಿಲ್ಲ ಎಂದರೆ ಸರಿಯಲ್ಲ. ವೇಲು ರವರ ಮನೆಯ ಮುಖ್ಯ ದ್ವಾರದಿಂದ ಅವರ ಮನೆಯ ಮುಂದಿನಿಂದ ಹಾದು ಹೋಗುವ ರಸ್ತೆಗೆ ಸುಮಾರು 30 ಅಡಿ ದೂರದಲ್ಲಿರುತ್ತದೆ. ವೇಲು ರವರ ಮನೆಯ ಮುಂದುಗಡೆಯೇ ಬೀದಿ ದೀಪ ಇರುತ್ತದೆ.

11. ನಮ್ಮ ಹಾಗೂ ವೇಲು ರವರ ಮನೆ ಅಕ್ಕ-ಪಕ್ಕದಲ್ಲಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಬಾಗಿಲನಿಂದ ವೇಲು ರವರ ಮನೆಗೆ ಯಾರು ಬಂದು ಹೋಗುತ್ತಾರೆಂದು ಕಾಣುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಓಡಿ ಹೋಗುತ್ತಿದ್ದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯು ಓಡಿ ಹೋಗುತ್ತಿದ್ದನ್ನು ನೋಡದೆ ಇದ್ದರ ಸಹ ಪೊಲೀಸರ ಮಾತು ಕೇಳಿ, ಆರೋಪಿಯು ಓಡಿ ಹೋಗುತ್ತಿದ್ದನ್ನು ನಾನು ನೋಡಿರುತ್ತೇನೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ರಾತ್ರಿ ವೇಲು ರವರ ಮನೆಯ ಒಳಗೆ ಮೊದಲು ಯಾರು ಹೋದರು ಎಂದು ನಾನು ನೋಡಿರುವುದಿಲ್ಲ. ವೇಲು ಹಾಗೂ ಸತ್ಯ ನಾರಾಯಣ ರವರ ಶವ ಬಿದ್ದ ಸ್ಥಳದಲ್ಲಿ ನಾನು ಹೋಗಿ ನೋಡಿದಾಗ, ಅಲ್ಲಿ ಸುಮಾರು 25 ಜನರು ಸೇರಿದ್ದರು ಹಾಗೂ ನಂತರ ಪೊಲೀಸರು ಅಲ್ಲಿಗೆ ಬಂದರು. ವೇಲುವಿನ ಶವದ ಪಕ್ಕದಲ್ಲಿ ನಾನು ಯಾವುದೇ ಊರುಗೋಲನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಇದೇ ಮೊದಲ ಬಾರಿಗೆ ಮುದ್ದೆ ಮಾಲು-13 ಊರುಗೋಲನ್ನು, ಮುದ್ದೆ ಮಾಲು-26 ಕತ್ತಿ, ಮುದ್ದೆ ಮಾಲು-27 ಟೀ- ಶರ್ಟ್, ಮುದ್ದೆ ಮಾಲು-28 ಚಡ್ಡಿಯನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು-13, 26 ರಿಂದ 28 ಗಳು ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ಸದರಿ ಮುದ್ದೆ ಮಾಲುಗಳನ್ನು ಪೊಲೀಸರು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ